ಇಸ್ಕೂಲಿಗೋಗು ಎಂದು ಎಚ್ಚರಿಸಿಯೇ ಹೋಗುತ್ತಿದ್ದಳು. ಕೊನೆಗೂ ಮಾದ ಶಾಲೆಚೀಲ ಗೂಟಕ್ಕೆ ಸಿಗಿಸಿ ಯಲ್ಲಾರೆಡ್ಡಿಯ ಹೆಲ್ಪರ್ ಆಗಿ ಅವನ ಬೆನ್ನ ಹಿಂದೆ ಕುಳಿತೇಬಿಟ್ಟಿದ್ದ. ಮಾದೇಶ ಯಲ್ಲಾ ರೆಡ್ಡಿ ಉರುಫ್ ಯಲ್ಲಾ ಜೋಸೆಫನ ಕೈ ಕೆಳಗಿನ ಆಳುಗಳಿಗೆ ಚಾ ಸಪ್ಲೆಯರ್ ಆಗಿ ಚಿರಪರಿಚಿತನಾಗಿದ್ದಾನೆಂಬುದು ಮಾದೇವಿಗೆ ತಿಳಿದದ್ದು ಅದೊಂದು ದಿನ ಭಜಿ ತಿನ್ನುತ್ತ ಯಲ್ಲಾರೆಡ್ಡಿಯ ಆಳುಗಳು ಮಾದೇಶನ ಬಗ್ಗೆ ಮಾತಾಡಿದಾಗಲೇ. ಸುದ್ದಿ ಗೊತ್ತಾದಾಗ ಬಹಳಷ್ಟು ಕುಗ್ಗಿ ಹೋಗಿದ್ದಳು ಮಾದೇವಿ. ರಾತ್ರಿ ರೊಟ್ಟಿ ಹಾಕಿ ಕೊಡುವಾಗ, "ಯಾಕ್ಲಾ ಮಾದೇಶ ಹಿಂಗ್ಮಾಡ್ದೆ? ಇಂಗಿಂಗೇ ಅಂತ ಅವ್ವಂಗೆ ಒಂದ್ಮಾತು ಯೋಳ್ಬಾರ್ದ?" ಕೇಳಿದ್ದಳು. ಮಾದೇಶ ಕೆಪ್ಪನಂತೆ ಉಂಡು ಎದ್ದು ಹೋಗಿದ್ದ. ತಾಯಿಯ ಮಾತುಗಳಿಗೆ ಕೆಪ್ಪನಂತಿರುವುದೇ ತಾನು ದೊಡ್ಡವನಾಗುತ್ತಿರುವುದರ ಸಂಕೇತವೆಂಬಂತೆ ಅವನ ವರ್ತನೆಯಿರುತ್ತಿತ್ತು. ಮಾದೇವಿಯೂ ಏನಾರ ಮಾಡ್ಕೊಳ್ಲಿ, ಅಪ್ಪನಂತಾಗದಿದ್ದರೆ ಸಾಕು ಅಂದುಕೊಂಡು ಸುಮ್ಮನುಳಿದಿದ್ದಳು. ಮುಂದೊಂದು ದಿನ ಮಾದೇಶ ಶೆಡ್ಡೊಳಗೆ ಏಸುಕ್ರಿಸ್ತನ ಫೋಟೊ ತಂದಿಟ್ಟು, "ಅವ್ವಾ, ದಿನಾ ಈ ಏಸಪ್ಪನಿಗೆ ಪ್ರಾರ್ಥನೆ ಮಾಡು. ನಮ್ಮ ಶೆಡ್ಡೊಳಗೆ ಯಾವ ಕೆಟ್ಟ ಕಣ್ಣು ಬೀಳೋದಿಲ್ಲ ಅಂತಂದು ಯಲ್ಲಾರೆಡ್ಡಿ ಕೊಟ್ಟ. ಅಂವ ಚರ್ಚಿಗೆ ಹೋಗಿ ಏಸಪ್ಪನ ಪ್ರಾರ್ಥನೆ ಸುರು ಮಾಡಿದ್ಮ್ಯಾಕೆ ಅನುಕೂಲ ಆಯ್ತಂತೆ" ಅಂದ. ಮಾದೇವಿ ಮಗನತ್ತ ಕಣ್ಣರಳಿಸಿ ನೋಡಿದ್ದಳು. ಆತ ದೇವರ ಗೂಡಲ್ಲಿ ಯಾವುಯಾವುದೋ ಪಟ ತಂದಿಟ್ಟಿದ್ದರ ಹಿಂದೆ ಯಲ್ಲಾರೆಡ್ಡಿಯ ವಾಸನೆ ಬಡಿಯಿತು ಮಾದೇವಿಗೆ. ತಿಪ್ಪೇಶನ ಜೊತೆ ತಾನು ಬಿಲ್ಡಿಂಗ್ ಕೆಲಸಕ್ಕೆ ಹೋಗದೆ ದುಡಿಯಲು ತನ್ನದೇ ದಾರಿ ಹುಡುಕಿದ್ದು ಯಲ್ಲಾರೆಡ್ಡಿಗೆ ಮಾತ್ರವಲ್ಲ ಜೊತೆಗೆ ಕೆಲಸ ಮಾಡುವ ಇತರ ಕುಟುಂಬಗಳಿಗೂ ಕಣ್ಣಿಗೆ ಕಾರಾಪುಡಿ ಬಿದ್ದಂತೆ ಆಗಿದ್ದೇಕೆ ಎಂದೇ ಮಾದೇವಿಗೆ ಅರ್ಥವಾಗಿರಲಿಲ್ಲ. ಅದರಲ್ಲೂ ಯಲ್ಲಾರೆಡ್ಡಿ ವಾರದ ಕೊನೆಗೆ ಸಂಬಳ ಬಟವಾಡೆಗೆ ಸತಾಯಿಸಿದಾಗೆಲ್ಲ ಹೆಂಗಸರು, "ದಿನಾ ಕಾಸೆಣಿಸುವ ನಿಂಗೆ ನಮ್ಕಷ್ಟ ಗೊತ್ತಾಗಾಕಿಲ್ಲ ಬಿಡು" ಎಂದೆಲ್ಲ ಹಂಗಿಸಿದಾಗ ಹಂಗಿಲ್ಲದ ತನ್ನ ದುಡಿತಕ್ಕೆ ಇವರ ಹೊಟ್ಟೆಯೊಳಗೆ ಭಗಭಗ ಬೆಂಕಿ ಏಳುವುದು ಯಾಕೆಂದು ಅರ್ಥವಾಗದೆ ನೋಯುತ್ತಿದ್ದಳು. ತಿಪ್ಪೇಶ ಸತ್ತ ಮೇಲಂತು ಅವಳ ಕೈಯಲ್ಲಿ ಕಾಸು ಉಳಿಯುತ್ತಿದ್ದುನ್ನು ಅರಿತುಕೊಂಡ ಹೆಂಗಸರು ವಯ್ಯಾರದಿಂದ ಪ್ರೀತಿ ತೋರಿಸಿ ಉಪ್ಪು ಮೆಣಸು ಹುಳಿಗೆಂದು ಕೈಗಡ ಒಯ್ದು ಹಿಂದಿರುಗಿಸಲು ನೆನಪಿಸಿದರೆ ಕೀಳು ಮಾತಿನಿಂದ ಹಂಗಿಸಿ ಕಟ್ಟಿ ಹಾಕಲು ಹವಣಿಸುತ್ತಿದ್ದರು. ಆಗೆಲ್ಲ ತನ್ನ ದುಡಿಮೆ ತನ್ನ ಹಸಿವಿನ ಉಸಾಬರಿ ಇವರಿಗ್ಯಾಕೆ ಅನಿಸಿದರೂ ಸುಮ್ಮನಿರುತ್ತಿದ್ದಳು. ಮಗನೂ ಹೊರಗಿನವನಾದಾಗ ಒಡಲಿಗೆ ಬೆಂಕಿ ಹತ್ತಿತ್ತು. ಯಲ್ಲಾರೆಡ್ಡಿ ಹೇಳಿದ ಕೆಟ್ಟಕಣ್ಣು ನಾಗೇಶಪ್ಪನ ಕುರಿತೇ ಅನಿಸಿ, "ನೀನೇನಾರ ಶೆಡ್ಡಿಗೆ ಕೆಟ್ಟಕಣ್ಣು ಬಿದ್ದದೆ ಅನ್ಕಂಡಿದ್ರೆ ಪ್ರಾರ್ಥನೆ ಮಾಡ್ಕ" ಎಂದು ಕನಲಿ ಹೇಳಿದ್ದಳು. ಮಾದ ಕೆಕ್ಕರಿಸಿ ನೋಡಿ ಹೊರ ನಡೆದಿದ್ದ.

ಏಸಪ್ಪನ ಚಿತ್ರಪಟದಲ್ಲಿ ಏನೋ ಮಾಟ ಇದೆ ಅನಿಸಿ ಮಾದೇವಿ ಅಂದಿನಿಂದ ನಾಗೇಶಪ್ಪ ಒಳ ಬಂದೊಡನೆ ಏಸಪ್ಪನ ಚಿತ್ರಪಟಕ್ಕೆ ತನ್ನ ಯಾವುದಾದರೂ ಹಳೆ ವಸ್ತ್ರ ಹೊದೆಸಿಬಿಡುತ್ತಿದ್ದಳು. ಆದರೂ ಅವಳು ಎಚ್ಚರಿಕೆ ವಹಿಸಿದ್ದು ಸಾಲಲಿಲ್ಲವೊ ಅಥವಾ ವಿಧಿ ಹೊಂಚು ಹಾಕುತ್ತಿತ್ತೋ ಆ ದಿನ ಮಾದೇಶ ಆವೇಶದಿಂದ ದಾಪುಗಾಲು ಹಾಕುತ್ತ ಶೆಡ್ಡಿನ ಬಾಗಿಲಿಗೆ ಬಂದವನೇ ಬಾಗಿಲ ಹೊರಗಿರುವ ವಸ್ತು ನೋಡಿ ಗಕ್ಕನೆ ನಿಂತುಬಿಟ್ಟ. ಮುಚ್ಚಿದ ತಗಡಿನ ಬಾಗಿಲ ಹೊರಗೆ ಗಂಡಸಿನ ಒಂದು ಜೊತೆ ಚಪ್ಪಲಿಯಿತ್ತು. ಬಾಗಿಲು ದೂಡಬೇಕೆಂದು ಕೈ ಇಟ್ಟವನು ಹಿಂದಕ್ಕೆಳೆದುಕೊಂಡು ಶೆಡ್ಡಿನ ಹಿಂಬದಿಗೆ ಹೋಗಿ ತಗಡು ಹಾಸಿನ ನಡುವಿನ ಕಂಡಿಯೊಳಗೆ ಇಣುಕಿದ. ಏಸಪ್ಪನ ಪಟಕ್ಕೆ ಮುಸುಕು ಹಾಕಿದ್ದು ಕಂಡಿತು. ಭುಸುಗುಡುತ್ತ ಕಟ್ಟಿಗೆಯೊಂದನ್ನು ಎಳೆದುಕೊಂಡು ಮತ್ತೆ ಎದುರು ಬಂದು ತಗಡಿನ ಬಾಗಿಲು ದಡದಡ ಬಡಿದ. ಬಾಗಿಲು ತೆರೆದವಳು ಮಾದೇವಿ. ಆಕೆಯ ಹಿಂದಿನಿಂದ